# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 05.03.2011**

ಮಾವಳ್ಳಿಪುರದ ಘನತ್ಯಾಜ್ಯ ವಿಲೇವಾರಿ ಘಟಕದಿಂದ ಸುತ್ತಮುತ್ತಲಿನ ಗ್ರಾಮದಲ್ಲಿ ಇರುವ ಕೊಳವೆ ಬಾವಿ ಮತ್ತು ಕೆರೆಗಳಲ್ಲಿನ ನೀರು ಮಾಲಿನ್ಯಗೊಂಡು ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರಿ ಜನರು ಅಸ್ವಸ್ಥಗೊಂಡಿರುತ್ತಾರೆ. ಈ ಬಗ್ಗೆ ಪಾಲಿಕೆಯಿಂದ ಕೂಡಲೇ ಮುಂಜಾಗ್ರತಾ ಕ್ರಮಗಳನ್ನು ಜರುಗಿಸಬೇಕೆಂದು ದಲಿತ ಸಂಘರ್ಷ ಸಮಿತಿಯ ಸದಸ್ಯರು ಮನವಿ ಮಾಡಿದ ಹಿನ್ನೆಲೆಯಲ್ಲಿ ಪಾಲಿಕೆ ಆಯುಕ್ತರು ಇಂದು ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ, ಸುಮಾರು 2 ಗಂಟೆಗಳ ಕಾಲ ಸಮಗ್ರವಾಗಿ ಪರಿಶೀಲನೆ ನಡೆಸಿದರು.

ತದನಂತರ ಮಾವಳ್ಳಿಪುರ ಗ್ರಾಮಕ್ಕೆ ತೆರಳಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು ಮತ್ತು ಕಾಯಿಲೆಯಿಂದ ಬಳಲುತ್ತಿರುವವರನ್ನು ಭೇಟಿ ಮಾಡಿ, ಅವರ ಯೋಗಕ್ಷೇಮವನ್ನು ವಿಚಾರಿಸಿದರು. ಅದೇ ಗ್ರಾಮದ ಮೂರ್ತಿ ಎಂಬ ಸ್ಥಳೀಯ ನಿವಾಸಿಯವರು ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿದ್ದು, ಇವರಿಗೆ ಸೂಕ್ತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕು. ಏಕೆಂದರೆ, ಇವರು ತೀರಾ ಬಡವನಾಗಿದ್ದರಿಂದ ವಾರಕ್ಕೆ ಎರಡು ಸಲ ಡಯಾಲಿಸಿಸ್ ಮಾಡಿಸಬೇಕಾಗಿದ್ದು, ಡಯಾಲಿಸಿಸ್ ಮಾಡಿಸುವುದಕ್ಕೆ ಸಾವಿರಾರು ರೂ.ಗಳು ಖರ್ಚಾಗುತ್ತಿವೆ ಎಂದು ಗ್ರಾಮಸ್ಥರು ಆಯುಕ್ತರಲ್ಲಿ ಮನವಿ ಮಾಡಿ, ಚಿಕಿತ್ಸೆ ನೀಡಲು ಕೋರಿದ್ದರು. ಅದಕ್ಕೆ ಪಾಲಿಕೆಯ ಆಯುಕ್ತರು ಆರೋಗ್ಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ, ಜಯನಗರದ ತಜ್ಞ ವೈದ್ಯರಾದ ಡಾ॥ ವೆಂಕಟೇಶ್ ರವರಿಂದ ಅವರ ಕಾಯಿಲೆ ಗುಣಮುಖರಾಗುವವರೆಗೂ ಉಚಿತವಾಗಿ ಚಿಕಿತ್ಸೆ ನೀಡಲು ತಿಳಿಸಿದರು.

ಈ ಗ್ರಾಮಸ್ಥರ ಆರೋಗ್ಯ ಕಾಪಾಡುವುದು ಪಾಲಿಕೆಯ ಜವಾಬ್ದಾರಿಯಾಗಿರುವುದರಿಂದ ಈ ಕೂಡಲೇ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

- ತ್ಯಾಜ್ಯ ವಿಲೇವಾರಿ ಘಟಕದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರತಿ ತಿಂಗಳು ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು.
- ಸೊಳ್ಳೆ ಮತ್ತು ನೊಣಗಳನ್ನು ನಿಯಂತ್ರಿಸಲು ನಾಳೆಯಿಂದಲೇ ಈ ಗ್ರಾಮಗಳಲ್ಲಿ ಔಷಧಿ ಸಿಂಪಡಣೆ ಕಾರ್ಯ ಪ್ರಾರಂಭವಾಗಬೇಕು.
- 3 ದಿನಗಳ ಒಳಗಾಗಿ ಸುತ್ತಮುತ್ತಲಿನ ಕೆರೆ, ಬಾವಿಗಳಿಂದ ನೀರಿನ ಮಾದರಿಗಳನ್ನು ಪಡೆದು, ಗುಣಮಟ್ಟವನ್ನು ಪರೀಕ್ಷಿಸುವುದು.
- ಸುತ್ತಮುತ್ತಲಿನ ಗ್ರಾಮದ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವ ಬಗ್ಗೆ ರೈತರು ತಿಳಿಸಿರುವುದರಿಂದ ತೋಟಗಾರಿಕೆ ತಜ್ಞರನ್ನು ಕರೆಯಿಸಿ, ಪರೀಕ್ಷೆ ನಡೆಸುವುದು.
- ಗುತ್ತಿಗೆದಾರರಾದ ಮೆ॥ ರಾಮ್ಕಿ ಸಂಸ್ಥೆಯವರಿಗೆ ನೋಟೀಸ್ ಜಾರಿ ಮಾಡಿ, ಆದಷ್ಟು ಬೇಗನೆ ತ್ಯಾಜ್ಯದಿಂದ ಹೊರಬಂದ ದ್ರವವನ್ನು ಶುದ್ಧೀಕರಣ ಮಾಡಲು ಘಟಕವನ್ನು ಸ್ಥಾಪಿಸುವುದು.
- ತೊಂದರೆಗೀಡಾದ ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ದೃಷ್ಟಿಯಿಂದ ಕಾವೇರಿ ನೀರು ಒದಗಿಸಲು ಚಿಂತನೆ ನಡೆಸುವುದು.

ಈ ಮೇಲಿನ ಎಲ್ಲಾ ಕ್ರಮಗಳು ಈ ಕೂಡಲೇ ಜರುಗಿಸಿ, 15 ದಿನಗಳ ಒಳಗಾಗಿ ಆಯುಕ್ತರಿಗೆ ನೇರವಾಗಿ ವರದಿ ಸಲ್ಲಿಸಲು ಉಪ ಆಯುಕ್ತರು (ಆರೋಗ್ಯ) ರವರಿಗೆ ಸೂಚಿಸಿದರು. ಆಯುಕ್ತರು ಆಗಾಗ್ಗೆ ಖುದ್ದಾಗಿ ಕೈಗೊಂಡ ಮುಂಜಾಗ್ರತೆ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸುವುದಾಗಿ ತಿಳಿಸಿದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**